97

# ಮೈಸೂರ ಗೆಜೆಟ್ಟು.

ಸಂ. XXXI. ಸರ್ಕಾರದಿಂದ ಘಾಯಿಷ್ ಆದ್ದು. [ನಂ. 34.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 27, ಸ॥ 1896.

## IIನೇ ಭಾಗ.

### ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜೀರು ಮಗೈರೀರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

### ವಿದ್ಯಾಭ್ಯಾಸದ ಇಲಾಖೆ.

### ಪ್ರಕಟನ ಪತ್ರಿಕೆ.

ಮೈಸೂರು ದೇಶೀ ಪರೀಕ್ಷೆಗಳು.

ಸ॥ 1896ನೇ ಇಸವಿ ಆಗಸ್ಟ್ ತಾರೀಖು 6.

(i) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಲೋವರ್ ಸೆಕಂಡರೀ ಪರೀಕ್ಷಾ ದೇಶಭಾಷಾ ಪರೀಕ್ಷೆಗಳಿಗೆ ಪ್ರವೇಶಧನವು (2—8—0) ರೂಪಾಯಿಗಳಿಗೆ ಬದಲಾಗಿ (3—0—0) ರೂಪಾಯಿಗಳಂತೆ ನಿಯಮಿಸಲ್ಪಟ್ಟಿರುತ್ತೆ.

(ii) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಕರ್ಣಾಟಕ ಪಂಡಿತ ಪರೀಕ್ಷೆಗೆ ಕರ್ಣಾಟಕ ಪಾಠನಕಾವ್ಯವು ಪೂರ್ತಿಯಾಗಿ ನಿಯಮಿಸಲ್ಪಟ್ಟಿರುತ್ತೆ.

ಮೈಸೂರು ಲೋವರ್ ಸೆಕಂಡರೀ ಪರೀಕ್ಷೆ.

ಸ॥ 1896ನೇ ಇಸವಿ ಆಗಸ್ಟ್ ತಾರೀಖು 14.

ಸಿ. ಬ್ಲೆಸ್ಸ; ಸಿ. ಕೆ. ಸುಬ್ಬರಾವು ಇವರುಗಳಿಂದ ರಚಿತವಾದ ವ್ಯವಸಾಯ ಶಾಸ್ತ್ರದ ಪ್ರಥಮ ಪುಸ್ತಕವು ತತ್ಕಾಲದಲ್ಲಿ ಛಾಪಿಸಲ್ಪಡುವದಿಲ್ಲವಾದ್ದರಿಂದ ಇತಃಪರ ಮತ್ತೊಂದು ಆವೃತ್ತಿ ಕೊಡುವ ವರೆವಿಗೂ ಹಾರ್ಮಾ ಸಾಹೇಬರವರಿಂದ ರಚಿಸಲ್ಪಟ್ಟ ಕನ್ನಡ ವ್ಯವಸಾಯ ಕ್ರಮ ಬೋಧಿನಿ ಎಂಬ ಪುಸ್ತಕವು ವ್ಯವಸಾಯ ಶಾಸ್ತ್ರಕ್ಕಾಗಿ ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತೆ.

ಎಚ್. ಜೆ. ಛಾಛ್ಮ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

### ಇನಾಂ ಇಲಾಖೆ.

### ಇಸ್ತಿಹಾರ್‌ನಾಮೆ.

ನಂಬರು 1. ತಾರೀಖು 18ನೇ ಆಗಸ್ಟ್ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ನಾಗಮಂಗಲ ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು (729) ಫೈನಲ್ ಟೈಟಲ್‌ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್ದಾರ್ರು ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಗೆ ಸದರೀ ಇನಾಂದಾರ್ರು ಖರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟಿಸ್‌ಗಳನ್ನ ದೇರ್‌ಮಾಡದೆ ಕೂಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಜಿಲ್ಲರೆ ಇನಾಂಗಳ ಬಗ್ಗೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್ಸ್.

---

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಿಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರೆಯುತ್ತೆ.

| ನಂಬರ್. | ತಯಾರ್ ಮಾಡಿದ ಕಾರ್ಖಾನೆ ಹೆಸರು. | | | | ಅಸಲ್ ಖರೀದಿ (ರೂಪಾಯಿ) | |
|---|---|---|---|---|---|---|
| 7 | ಬೆಂಗಳೂರು ರಿಕ್ಕಿಯವರ ಕಾರ್ಖಾನೆ | | .. | .. | ವಂದಕ್ಕೆ | 150 |
| 2 | ಇಂಗ್ಲಾಂಡ್ ಪ್ರೋರ್ಟರು ಬ್ರದರ್‌ಸ್‌ರ ಡಿಟೋ | | .. | .. | ,, | 170 |
| 1 | ಮದ್ರಾಸ್ ಓಕ್ಸ್‌ರವರ | ಡಿಟೋ | .. | .. | ,, | 250 |
| 1 | ಡಿಟೋ | ಡಿಟೋ | ಡಿಟೋ | .. | ,, | 188 |
| 1 | ಡಿಟೋ | ಬೋರ್ಯಾಮ್‌ರವರ | ಡಿಟೋ | .. | ,, | 85 |

ಖರೀದೀದಾರ್ರು ವ್ಯವಸಾಯು ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಕೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ಯಯಿಸಲ್ಪಡುವದು.

ಯಲ್. ಕಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

---

## ನಂದೀದುರ್ಗದ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾಬೆ ಡಿಕ್ರಿ ದೇಣೇದಾರ ಬೆಂಗಳೂರು ಹುರಿಯುವ ಪೇಟೇಲಿರುವ ಸರಿಗೆ ಪಿಲ್ಲಯ್ಯನ ವಿಷಯದಲ್ಲಿ—

ಸ್ಯ 1895—96ನೇ ಇಸವಿ ದಿವಾಳಿ ವ್ಯಾಜ್ಯದ ನಂಬರು 6.

ಹುಕುಂ,

ಮೇಲ್ಕಂಡ ಸರಿಗೆ ಪಿಲ್ಲಯ್ಯನು ಖುಲಾಸೆಯಾಗಬೇಕೆಂದು ಕೋರಿ ಬರೆದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರನ ಸಮಕ್ಷಮದಲ್ಲಿಯೂ ಮತ್ತು ಖರ್ಜ ಅರ್ಜೀದಾರನ ಲೇಣೇದಾರರಾದ 1ನೇ ಬೆಂಗಳೂರು ಬೀಗಮುದ್ರೆ ವ್ಯಾಪಾರಿಯಲ್ಲಿರುವ ವೆಂಕಪ್ಪನ ಮಗ ಮಾತೃಬಾಯಿ ಕೃಷ್ಣಪ್ಪ 2ನೇ ಮಾತೃಬಾಯಿ ಹೊನ್ನಪ್ಪ 3ನೇ ಕಬಾಡಿ ವೆಂಕೂಸಾ ಯವರ ತರಫ್ ಫಸ್ಟ್ ಗ್ರೇಡ್ ಪ್ಲೀಡರ್ ಎ. ಸುಬ್ಬರಾಯರ ಯದುರಾಗಿಯೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—4ನೇ ಬೆಂಗಳೂರು ಗಾಣಿಗರ ಪೇಟೇಲಿರುವ ಗುಡಿ ವೀರಣ್ಣ, 5ನೇ ಡಿಟೋ ಸರಿಗೆ ಪೇಟೆಯಲ್ಲಿರುವ ಸಿದ್ದಯ್ಯ, 6ನೇ ಬೆಂಗಳೂರು ಲಾಲ್‌ಬಾಗ್ ವಾಪಹಳ್ಳಿಯಲಿರುವ ಸಾಹುಕಾರ್ ರುದ್ರಪ್ಪ,

ಇದರೀ ಸುಗೆ ಪಿಲ್ಲಯ್ಯನು ತನ್ನ ಸಾಲಗಾರ್ರಿಗೆ ಪಾವತಿ ಬಗ್ಗೆ ಮಾಹೆಯಾನಾ ತಪ್ಪದೆ ಈ ಕೋರ್ಟಿಗೆ (3—0—0) ಮೂರು ರೂಪಾಯಿ ಹಾಜರ್ಮಾಡುವ ಪರತ್ತಿನ ಮೇಲೆ ದಿವಾಳಿಯಾದವನೆಂದೂನ್ನೂ ಸಿವಿಲ್ ಪ್ರೊಸೆಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ.

ಸ್ಯ 1895ನೇ ಇಸವಿ ನವಂಬರ್ 16ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

3ನೇ ಕ್ರಡಿಟರು ಕಬಾಡಿವೆಂಕೂಸಾ ಯವರನ್ನು ಮೇಲ್ಕಂಡ ದಿವಾಳಿಯಾದವನ ಜೆಂದಿಗಿಗೆ ರಿಸೀವರಾಗಿ ನೊಕರರ್ಮಾಡಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿದೆ.

ಇದಕ್ಕೆ ಲಗತ್ತಾಗಿಯಿರುವ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರುಗಳಿಗೆ ಯದುರಾಗಿ ದಾಖಲಾಗಿ ಯಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿದ್ದಾರೆಂದು ಯಿದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿರುತ್ತದೆ.